ಮುಂದೆ ನಮ್ಮ ಹಳ್ಳಿಮನೆಯಲ್ಲಿ ನನಗೆ ಊಟ ಸೇರಲಿಕ್ಕಿಲ್ಲ' ಎಂದು ರಂಗ ಹೇಳುತ್ತಾನಾದರೂ ತನಗ್ಯಾಕೆ ಶ್ರೀಮಂತರ ಮನೆ ಊಟ ಎಂಬುದು ಅವನ ಯೋಚನೆ.

ಭೂಪತಿ ಪೂರ್ತಿ ಮೊದಲಿನಂತಾಗಿ ತನ್ನ ದೈನಂದಿನ ವ್ಯವಹಾರಗಳಲ್ಲಿ ತೊಡಗಿಕೊಂಡ. ರಾತ್ರಿ ನಿದ್ದೆ ಕೆಟ್ಟುದುದರಿಂದಲೋ, ಅತಿಯಾದ ಓಡಾಟದಿಂದಲೋ ಸಮಯಕ್ಕೆ ಸರಿಯಾಗಿ ಆಹಾರ ತೆಗೆದುಕೊಳ್ಳದಿದ್ದುದರಿಂದಲೋ ಅಥವಾ ಇನ್ನಾವ ಕಾರಣದಿಂದಲೋ ರಂಗನಿಗೆ ಸಣ್ಣಗೆ ಜ್ವರ ಕಾಣಿಸಿಕೊಂಡಿತು. ಜ್ವರ ಬರುತ್ತದೆ ಹೋಗುತ್ತದೆ ಎಂದು ರಂಗ ಅದಕ್ಕೆ ವಿಶೇಷ ಗಮನ ಕೊಡಲಿಲ್ಲ. ಆದರೆ ನಾಲ್ಕು ದಿನ ಕಳೆದ ಮೇಲೆ ಒಂದು ಮುಂಜಾನೆ ಕಾಫಿ ತೆಗೆದು ಕೊಂಡು ಪದ್ಮನಿಗೆ ಕೊಡಲು ಮಹಡಿ ಹತ್ತಿದವನು ಕೊನೆಯ ಮೆಟ್ಟಲಲ್ಲಿ ಕುಳಿತು ಬಿಟ್ಟ . ಅವನ ಕೈಯಿಂದ ಕಾಫಿ ಕಪ್ ಕೆಳಗೆ ಬಿತ್ತು. ಶಬ್ದ ಕೇಳಿ ಕೆಳಗಿನಿಂದ ಅಡುಗೆಯವಳು, ಮೇಲಿನ ಕೋಣೆಯಿಂದ ಪದ್ಮ ಕೂಡಲೇ ಬಂದರು. ಅವನಿಗೆ ಜ್ವರ ಬಂದಿರುವ ವಿಷಯ ಅವರಿಗೆ ಆಗಲೇ ಗೊತ್ತಾದುದು. ಪದ್ಮ ಯಾವುದೋ ಜ್ವರದ ಮಾತ್ರೆ ಕೊಟ್ಟು ಮಲಗುವಂತೆ ತಿಳಿಸಿದಳು. ಎರಡು ದಿನ ಕಳೆದರೂ ಜ್ವರ ಕಡಿಮೆಯಾಗಲಿಲ್ಲ. ಅಲ್ಲದೆ ಊಟವೂ ಸೇರದಾಯಿತು. ಕೊನೆಗೆ ಲಕ್ಷ್ಮಿಯ ಜೊತೆ ಪಕ್ಕದ ದವಾಖಾನೆಗೆ ಹೋಗಿ ಬಂದ. ಇಂಜೆಕ್ಶನ್ ಚುಚ್ಚಿ, ಮಾತ್ರೆಗಳನ್ನು ಕೊಟ್ಟ ವೈದ್ಯರು ವಾಸಿಯಾಗಲು ಕಡಿಮೆ ಅಂದರೆ ಒಂದು ವಾರವಾದರೂ  ಬೇಕು ಅಂದರು. ಪಾರ್ವತಿ ರವೆಯ ಗಂಜಿ ಮಾಡಿ ಕೊಡುತ್ತಾಳಾದರೂ ರಂಗನಿಗೆ ಯಾವುದೂ ಸೇರುತ್ತಿರಲಿಲ್ಲ. ಆಯಾಸದಿಂದ ಮಲಗಿಕೊಂಡೇ ಇರುತ್ತಿದ್ದ.

ಒಂದು ದಿನ ರಾತ್ರಿ ಸುಮಾರು ಏಳು ಗಂಟೆಗೆ ಬಾಗಿಲ ಕರೆ ಗಂಟೆ ಬಾರಿಸಿತು. ಭೂಪತಿ ಬಾಗಿಲು ತೆರೆದ. ಲುಂಗಿ ತೊಟ್ಟುಕೊಂಡು, ಹೆಗಲಿಗೊಂದು ಶಲ್ಯ ಹಾಕಿಕೊಂಡ ವ್ಯಕ್ತಿಯೊಂದು ಬಾಗಿಲ ಬಳಿ ನಿಂತಿತ್ತು. ಯಾರು? ಏನು ಬೇಕಾಗಿತ್ತು? ಎಂಬ ಭಾವವನ್ನು ಭೂಪತಿಯ ಮುಖದಲ್ಲಿ ಕಂಡು, 'ರಂಗ ಇರುವ ಹಳ್ಳಿಯಿಂದ ಬಂದಿದ್ದೇನೆ ಬುದ್ಧಿ, ಹೆಸರು ಗೋಪಾಲ' ಎಂದು ಬಂದವನು ಹೇಳಿದ. ಭೂಪತಿ ರಂಗನ ಕೋಣೆಯ ಬಳಿ ಬಂದು 'ನಿನ್ನ ಹಳ್ಳಿ ಯಿಂದ ಯಾರೋ ಗೋಪಾಲ ಎಂಬವನು ಬಂದಿದ್ದಾನೆ. ಯಾಕೆ ಬಂದಿದ್ದಾನೆ ಅವನು?' ಎಂದ.

'ತಿಂಗಳಿಗೊಂದು ಬಾರಿ ನಮ್ಮ ಎಂಡ್ರು ಅಮ್ಮನ ಫೋನಿಗೆ ಕರೆ ಮಾಡುತ್ತಾಳಲ್ಲಾ, ಈ ಬಾರಿ ಮಾತನಾಡಿದಾಗ ನನ್ನ ಅಸೌಖ್ಯದ ಬಗ್ಗೆ ಅಮ್ಮ ಹೇಳಿದ್ದಾರೆ. ನಾನಾದರೆ ಹೇಳುತ್ತಿರಲಿಲ್ಲ ಸ್ವಾಮಿ' ಎಂದ ರಂಗ. ಭೂಪತಿ ಏನೂ ಹೇಳದೆ ಗೋಪಾಲನನ್ನು ರಂಗನ ಕೋಣೆಯ ಬಳಿ ತಂದು ಬಿಟ್ಟ. ಉದ್ದಕ್ಕೆ ವಿಶಾಲವಾಗಿರುವ ಹಾಲ್ ದಾಟಿದ ನಂತರ ಬಟ್ಟೆ ಒಗೆಯುವುದು,ಪಾತ್ರೆ ತೊಳೆಯುವುದು ಮುಂತಾದ ಕೆಲಸಗಳನ್ನು ಮಾಡಲು ಜಾಗ ಬಿಡಲಾಗಿದೆ. ಅಲ್ಲೇ ಹಿಂಬದಿಗೆ ರಂಗನ ಕೋಣೆ ಇರುವುದು. ಅಲ್ಲಿ ಸುಮಾರು ಗಿಡ ಮರಗಳೂ ಇವೆ. ಭೂಪತಿ ಆ ಜಾಗ ದಾಟಿ ಹಿಂದೆ ಬರುವಾಗ ಕಾಲಿಗೆ ಏನೋ ಚುಚ್ಚಿದಂತಾಯಿತು. ನೋಡಿದಾಗ ಉದ್ದನೆಯ ಮುಳ್ಳೊಂದು ಚುಚ್ಚಿತ್ತು. ಅದನ್ನು ನಿಧಾನವಾಗಿ ತೆಗೆದು ಭೂಪತಿ ಸುತ್ತಲೂ ನೋಡಿದ. ಅಲ್ಲಿ ದೀಪದ ವ್ಯವಸ್ಥೆ ಇಲ್ಲದುದರಿಂದ ಸರಿಯಾಗಿ ಕಾಣುತ್ತಿರಲಿಲ್ಲ. ತಾನಾಗಲಿ ಪದ್ಮಳಾಗಲೀ ಈ ಕಡೆ ಬರುವುದೇ ಇಲ್ಲ. ಕಳೆ ಗಿಡಗಳು ಬಹಳಷ್ಟು ಹುಟ್ಟಿಕೊಂಡಿರಬಹುದು. ಎಲ್ಲ ತೆಗೆಸಿ ಹಾಕಿ ಸ್ವಚ್ಛ ಮಾಡಿಸಬೇಕು ಎಂದುಕೊಂಡು  ಕಣ್ಣು ಕಿರಿದು ಮಾಡಿ ನೋಡಿದ. ಕತ್ತಲೆಗೆ ಏನೂ ಕಾಣಿಸಲಿಲ್ಲ.

ಮುಂದೆ ಹೆಜ್ಜೆ ಇಟ್ಟವನಿಗೆ ಪಕ್ಕನೆ ರಂಗನ ನೆನಪಾಯಿತು. ಆ ಗೋಪಾಲ ಎಂಬವನು ಬಂದು ಇಷ್ಟು ಹೊತ್ತಾಯಿತು ಯಾವ ಧ್ವನಿಯೂ ಕೇಳಿಸುತ್ತಿಲ್ಲವಲ್ಲಾ. ಯಾಕಿರಬಹುದು ಎಂದುಕೊಂಡವನು ಹಿಂದೆ ತಿರುಗಿ ರಂಗನ ಕೋಣೆಯ ಬಳಿ ಬಂದ. ಅಲ್ಲಿಯ ದೃಶ್ಯ ನೋಡಿದವನು, ತಾನು ಅವರಿಗೆ ಕಾಣದಂತೆ ಇನ್ನೂ ಸ್ವಲ್ಪ ಮರೆಯಾಗಿ ನಿಂತ. ರಂಗ ಚಾಪೆಯ ಮೇಲೆ ಗೋಡೆಗೆ ಒರಗಿ ಕುಳಿತಿದ್ದ. ಅವನ ಎದುರು ಗೋಪಾಲ ಕುಳಿತಿದ್ದ. ಇಬ್ಬರೂ ಒಬ್ಬರಿಗೊಬ್ಬರು ತಮ್ಮ ಕೈಗಳನ್ನು ಹಿಡಿದುಕೊಂಡಿದ್ದರು. ಹೊರಗೆ ಕತ್ತಲು ಇದ್ದಿದುದರಿಂದ ಕೋಣೆಯ ಬೆಳಕಿನಲ್ಲಿ ಅವರಿಬ್ಬರ ಮುಖಗಳು ಭೂಪತಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತಿ ದ್ದರು. ಇಬ್ಬರ ಮುಖಗಳಲ್ಲೂ ಪುಟ್ಟದೊಂದು ಮಂದಹಾಸ. ಕಣ್ಣುಗಳು ಹೊಳೆಯುತ್ತಿದ್ದುವು. ಅವರ ಕಣ್ಣುಗಳಿಂದ ಪ್ರೀತಿಯ ಧಾರೆ ಹರಿಯುತ್ತಿದೆಯೇನೋ ಎಂಬಂತೆ ಭಾಸವಾಯಿತು ಭೂಪತಿಗೆ. ಇಂಥಹುದೊಂದು ಮುಖ ಭಾವವನ್ನು ಭೂಪತಿ ಯಾವತ್ತೂ ನೋಡಿರಲಿಲ್ಲ. ಯಾವ ನಟನಿಗೂ ಈ ಭಾವವನ್ನು ಸಮರ್ಥವಾಗಿ ಅಭಿನಯಿಸಲು ಸಾಧ್ಯವಿಲ್ಲ ಎಂದುಕೊಂಡ ಭೂಪತಿ. ಅವನಿಗೆ ಅವರನ್ನು ಹಾಗೆಯೇ ನೋಡುತ್ತಲೇ ಇರಬೇಕೆನಿಸಿ, ಪಕ್ಕದಲ್ಲಿದ್ದ ಬಟ್ಟೆ ಒಗೆಯುವ ಕಲ್ಲಿನ ಮೇಲೆ ಕುಳಿತುಕೊಂಡ. ಅದೆಷ್ಟು ಹೊತ್ತು ರಂಗ ಮತ್ತು ಗೋಪಾಲ ಹಾಗೆಯೇ ಕುಳಿತಿದ್ದರೋ. ನಿಧಾನವಾಗಿ ಅವರಿಬ್ಬರ ಕಣ್ಣುಗಳಲ್ಲಿ ನೀರು ತುಂಬ ತೊಡಗಿತು. ಭೂಪತಿ ನೋಡುತ್ತಲೇ ಇದ್ದ. ಈಗ ಕಣ್ಣುಗಳಿಂದ ನೀರ ಹನಿಗಳು ಕೆನ್ನೆಯ ಮೇಲೆ ಬಿದ್ದು ಕೆಳಗೆ ಜಾರತೊಡಗಿದುವು. ಕೂಡಲೇ ಇಬ್ಬರೂ ಎಚ್ಚತ್ತುಕೊಂಡರು. ಗೋಪಾಲ ರಂಗನ ಕಣ್ಣು, ರಂಗ ಗೋಪಾಲನ ಕಣ್ಣು ಒರೆಸಿದರು. ಈಗ ಇಬ್ಬರ ಮಂದಹಾಸ ಮರೆಯಾಗಿ ಬಾಯಿ ತುಂಬಾ ನಕ್ಕರು.

'ತುಂಬಾ ಬಡವಾಗಿದ್ದಿಯಲ್ಲೋ ರಂಗ' ಎಂದ ಗೋಪಾಲ.

'ಜ್ವರ ಬಂತಲ್ಲಾ ಹಾಗಾಗಿ ಊಟ ಸೇರುತ್ತಿರಲಿಲ್ಲ. ಈಗ ಎರಡು ದಿನಗಳಿಂದ ಊಟ ಮಾಡುತ್ತಿದ್ದೇನೆ. ನಾಳೆಯಿಂದ ಓಡಾಡಬಹುದು. ಅದು ಸರಿ, ಯಾಕೋ ಇಷ್ಟು ದೂರ ಬರಲು ಹೋದೆ? ಖರ್ಚು ಬೇರೆ ಕಮ್ಮಿಯೇನು?' ಕೇಳಿದ ರಂಗ.

'ನಿನ್ನೆಯೇ ಬರಬೇಕಿತ್ತು. ಯಾರು ಹೊರಡುವುದೆಂದು ನಿಶ್ಚಯವಾಗಿರಲಿಲ್ಲ. ಮೊದಲು ನಿನ್ನ ಎಂಡ್ರು ಬರುವುದೆಂದಾಯಿತು. ಆದರೆ ಅವಳಿಗೆ ಜೊತೆ ಬೇಕಲ್ಲಾ?'

'ಇಬ್ಬರಿಗೆ ಖರ್ಚು ಜಾಸ್ತಿ ಎಂದು ಕೊನೆಗೆ ನಾನು ಆಯ್ಕೆಯಾದೆ. ನಾನು ನಾನು ಎಂದು ಬರಲು ಎಲ್ಲರೂ ತುದಿಗಾಲಲ್ಲಿ ನಿಂತಿದ್ದರು. ಪ್ರತಿಯೊಬ್ಬರೂ ಐವತ್ತು, ನೂರು, ಇನ್ನೂರು ಎಂದು ಕೊಟ್ಟರು.' ಅದನ್ನು ಕೇಳಿದ ರಂಗನ ಮುಖದಲ್ಲಿ ಮೂಡಿದ ಒಂದು ವಿಧದ ತೃಪ್ತಿಯ , ಸಾರ್ಥಕ ಭಾವವನ್ನು ಭೂಪತಿ ಗುರುತಿಸಿದ.

ಗೋಪಾಲ ರಂಗನನ್ನೇ ದಿಟ್ಟಿಸಿ ನೋಡುತ್ತಿದ್ದ.

'ಯಾಕೋ ಹಂಗೆ ನೋಡುತ್ತಿದ್ದಿ?' ಕೇಳಿದ ರಂಗ

'ಈ ಶರಟು?' ಪ್ರಶ್ನೆಯೊಂದಿಗೇ ಉತ್ತರಿಸಿದ ಗೋಪಾಲ

'ಹೌದು. ನಿನ್ನದೇ'

'ಎರಡು ವರ್ಷದ ಹಿಂದೆ ಕೊಟ್ಟಿದ್ದು. ಈಗಲೂ ಹಂಗೇ ಇದೆ'

'ನಾನು ಇದನ್ನು ಹೆಚ್ಚು ಧರಿಸುವುದೇ ಇಲ್ಲ. ಇಲ್ಲಿ ನಿತ್ಯ ಒಗೆದ ಬಟ್ಟೆ ಧರಿಸಬೇಕು. ಹಾಗಾಗಿ ಹಳತು, ಹೊಸದು ಸಾಕಷ್ಟು ಬಟ್ಟೆ ಕೊಟ್ಟಿದ್ದಾರೆ. ಅಪರೂಪಕ್ಕೊಮ್ಮೆ ಕೆಲಸ ಎಲ್ಲ ಮುಗಿದ ಮೇಲೆ ಸಾಯಂಕಾಲ ಈ ಶರಟು ಧರಿಸಿ ರಾತ್ರಿ ಮಲಗುವಾಗ ಎತ್ತಿಟ್ಟುಕೊಳ್ಳುತ್ತೇನೆ. ಇದು ಹೊಸದಲ್ಲವೇ. ಇದನ್ನು ಒಮ್ಮೆಯೂ ಒಗೆದಿಲ್ಲ. ಹಾಗಾಗಿ ಹೊಸದರ ಹಾಗೆಯೇ ಕಾಣುತ್ತಿದೆ.'

'ಹೊಸದಲ್ಲ  ರಂಗ. ನಾನು ಇದನ್ನು ಅನೇಕ ಬಾರಿ ಧರಿಸಿದ್ದೇನೆ. ನಂತರವೇ ನಿನಗೆ ಕೊಟ್ಟಿರುವುದು.'

'ನಾನು ಇಲ್ಲಿ ಬರುವುದಕ್ಕೆ ಎರಡು ತಿಂಗಳು ಮೊದಲು ನೀನಿದನ್ನು ಕೊಂಡಿರುವುದು ಅಷ್ಟೆ. ಇದನ್ನು ಧರಿಸಿದಾಗ ನನ್ನ ಮೈಯಲ್ಲಿ ಒಂದು ರೀತಿಯ ಪುಳಕ ಉಂಟಾಗುತ್ತದೆ ಗೋಪಾಲ. ಹಾಗಾಗಿ ಯಾವಾಗಲಾದರೊಮ್ಮೆ ಇದನ್ನು ಧರಿಸಿ ಆ ಪುಳಕವನ್ನು ಅನುಭವಿಸುತ್ತೇನೆ. ಯಾಕೋ ಇಂದು ಇದನ್ನು ಧರಿಸಲೇ ಬೇಕೆಂದಾಯಿತು. ಇದು ಬಹುಶಃ ನಿನ್ನ ಆಗಮನದ ಸೂಚನೆ ಇರಬಹುದೇನೋ'

ಭೂಪತಿ ಮೆಲ್ಲನೆ ಎದ್ದು, ನಿಧಾನವಾಗಿ ಸದ್ದಾಗದಂತೆ ನಡೆದು ಹೋದ. ನಂತರ ಏನೋ ನೆನಪಾಗಿ ಹೆಜ್ಜೆ ಸದ್ದು ಮಾಡುತ್ತಾ ರಂಗನ ಕೋಣೆಯ ಬಳಿ ಬಂದ. ಅವನನ್ನು ನೋಡಿದ ಗೋಪಾಲ ಧಡಕ್ಕನೆ ಎದ್ದು ನಿಂತು 'ಇದೋ ಈಗಲೇ ಹೊರಟೆ ಬುದ್ದಿ' ಎಂದ.

'ಎಲ್ಲಿಗೆ?' ಕೇಳಿದ ಭೂಪತಿ

'ಊರಿಗೆ ಬುದ್ದಿ'

'ನಿಮ್ಮೂರಿನಿಂದ ಮುಂಜಾನೆ ಹೊರಟಿರಬಹುದು. ಈಗ ತಾನೆ ಬಂದು ತಲಪಿದ್ದಿ. ಇಷ್ಟು ಹೊತ್ತಿಗೆ ಹೇಗೆ ಮರಳಿ ಹೋಗುತ್ತೀ?'

'ರಾತ್ರಿ ಹನ್ನೊಂದು ಗಂಟೆಯವರೆಗೆ ನಮ್ಮೂರಿಗೆ ಬಸ್ಸುಗಳಿವೆ ಬುದ್ದಿ'

'ಇಂದು ರಂಗನ ಜೊತೆ ಇದ್ದು ನಾಳೆ ಹೋಗುವೆಯಂತೆ' ಎಂದು ಹೇಳಿ ಭೂಪತಿ ಅಡುಗೆ ಕೋಣೆಗೆ ಬಂದ.

ಭೂಪತಿಯನ್ನು ನೋಡಿದ ಪಾರ್ವತಿ 'ಅಡಿಗೆ ಎಲ್ಲಾ ಮುಗಿಸಿ ಮೇಜಿನ ಮೇಲೆ ಇಟ್ಟಿದ್ದೇನೆ ಸರ್ ನಿಮಗೆ ಬಡಿಸಿ ಹೋಗಲೇ ?' ಎಂದಳು.

'ಬೇಡ. ರಂಗನನ್ನು ನೋಡಲು ಅವನ ಊರಿನಿಂದ ಯಾರೋ ಬಂದಿದ್ದಾನೆ. ಅವನಿಗ ಉಣ್ಣಲು ಏನಾದರೂ ಕೊಡು. ಇದನ್ನು ಹೇಳಲು ಬಂದೆ' ಎಂದ ಭೂಪತಿ.